

ಮಾಳವ್ವನನ್ನು ದಿಕ್ಕೆಡಿಸಿತ್ತು. ಇದ್ದೊಬ್ಬ ಮಗನ ಮದುವೆಯನ್ನೂ ನೋಡದೆ ಕಣ್ಮುಚ್ಚಿಕೊಂಡಿದ್ದ ಗಂಡನನ್ನು ನೆನೆಯುತ್ತಾ ದಿನವೂ ಸವೆಯತೊಡಗಿಳು. ತನ್ನ ಕಥೆಯೋ ಹೆಂಗೋ ಏನೋ ಎಂಬುದಾಗಿ ಚಿಂತಿಸುತ್ತಾ ಆದಷ್ಟು ಬೇಗ ಮಗನಿಗೆ ಮದುವೆಯಾಗುವಂತೆ ವರಾತಕ್ಕಿಟ್ಟುಕೊಂಡಿದ್ದಳು. ಬೆಳಗು ಬೈಗುಗಳಲ್ಲಿ ಅವ್ವನ ಕಾಟವನ್ನು ತಾಳಲಾದೆ, ಸಾಲದ್ದಕ್ಕೆ ಅವ್ವನಿಗೂ ಏನಾದರೂ ಆಗಿಬಿಟ್ಟರೆ ತನಗಿನ್ಯಾರೂ ಅನ್ನುವ ಕಾರಣಕ್ಕೆ ಗದ್ದಿಗ್ಯಪ್ಪ ಮದುವೆಗೆ ಒಪ್ಪಿಕೊಂಡಿದ್ದ. ಮದುವೆಯಾಗಿ ತಿಂಗಳು ಕೂಡಾ ಕಳೆದಿರಲಿಲ್ಲ. ಎಂದಿನಂತೆ ಎಮ್ಮೆಗಳನ್ನು ಮೇಯಿಸಲೆಂದು ಹೋಗಿದ್ದ ಮಾಳವ್ವ ಸಂಜೆ ತಿರುಗಿ ಮನೆಗೆ ಹೊಡಕಂಡು ಬರುವಾಗ ತನಗಿದ್ದ ಅರೆ ಕಿವುಡಿನಿಂದಾಗಿ ರೈಲ್ವೆ ಹಳಿಗಳನ್ನು ದಾಟುವ ಹೊತ್ತಿನಲ್ಲಿ ರೈಲಿಗೆ ಸಿಕ್ಕಿ ಎಮ್ಮೆಗಳ ಜೊತೆ ತೀರಿಕೊಂಡಿದ್ದಳು.

3